

# ನಿನ್ನೆ-ನಾಳೆ ದ್ವೀಪಗಳು!

ಅಮೆರಿಕ ಮತ್ತು ರಷ್ಯಾಗಳ ನಡುವಣ ಅಂತರರಾಷ್ಟ್ರೀಯ ಗಡಿಪ್ರದೇಶದಲ್ಲಿ 'ನಿನ್ನೆ–ನಾಳೆ' ದ್ವೀಪಗಳಿವೆ.

■ ಎಚ್.ಎಸ್. ನಂದಕುಮಾರ್

ತಲೆಬರಹದಲ್ಲೇನೋ ವ್ಯತ್ಯಾಸವಾಗಿದೆ ಎಂದು ಅನಿಸುತ್ತಿದೆಯೇ? ಏನೂ ವ್ಯತ್ಯಾಸವಾಗಿಲ್ಲ! ಬೆರಿಂಗ್ ಸಾಗರ ಹಾಗೂ ಚಕ್ಚಿ ಸಾಗರದ ಮಧ್ಯದಲ್ಲಿನ ಬೆರಿಂಗ್ ಜಲಸಂಧಿಯಲ್ಲಿ ಎದುರುಬದರಾಗಿರುವ 'ಡಯೋಮೀಡ್' ದ್ವೀಪಗಳೇ ನಿನ್ನೆ–ನಾಳೆ ದ್ವೀಪಗಳು!

ದೊಡ್ಡ ಡಯೋಮೀಡ್ ದ್ವೀಪ ರಷ್ಯಾ ದೇಶದಲ್ಲಿದ್ದರೆ, ಚಿಕ್ಕ ಡಯೋಮೀಡ್ ದ್ವೀಪ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿದೆ. ರಷ್ಯಾದ ಸೈಬೀರಿಯಾ ಹಾಗೂ ಅಮೇರಿಕದ ಅಲಾಸ್ಕಾದ ಮಧ್ಯದಲ್ಲಿರುವ ಈ ದ್ವೀಪಗಳು ರಷ್ಯಾದ ಪೂರ್ವದ ತುತ್ತ ತುದಿ ಹಾಗೂ ಅಮೇರಿಕದ ಪಶ್ಚಿಮ ಭಾಗದ ಸಂಗಮ ಪ್ರದೇಶ. ಇವುಗಳ ನಡುವಿನ ಅಂತರ ಕೇವಲ 3.80 ಕಿಲೋಮೀಟರ್. ಆದರೆ ಇವುಗಳ ನಡುವಿನ ಸಮಯದ ಅಂತರ ಬರೋಬ್ಬರಿ ಇಪ್ಪತ್ತೊಂದು ಗಂಟೆಗಳು! ಆದ್ದರಿಂದಲೇ ರಷ್ಯಾದ ಡಯೋಮೀಡ್ ದ್ವೀಪದಲ್ಲಿನ 'ಇಂದು', ಅಮೇರಿಕದ ಡಯೋಮೀಡ್ ದ್ವೀಪದಲ್ಲಿ 'ನಾಳೆ'. ಅಂತೆಯೇ ಅಮೆರಿಕ ದ್ವೀಪದಲ್ಲಿನ 'ಇಂದು' ರಷ್ಯಾ ದ್ವೀಪದಲ್ಲಿ 'ನಿನ್ನೆ'. ಆದ್ದರಿಂದಲೇ ಇವುಗಳನ್ನು 'ನಿನ್ನೆ–ನಾಳೆ' ದ್ವೀಪಗಳೆನ್ನುತ್ತಾರೆ!

ಆಶ್ಚರ್ಯವಾಗುತ್ತಿದೆಯಲ್ಲವೆ? ಸಮಯದಲ್ಲಿನ ಈ ಅಗಾಧ ವ್ಯತ್ಯಾಸಕ್ಕೆ ಕಾರಣ, ಈ ಎರಡು ದ್ವೀಪಗಳ ನಡುವೆ ಹಾದುಹೋಗಿರುವ ಅಂತರರಾಷ್ಟ್ರೀಯ ದಿನಾಂಕ ರೇಖೆ (International date line). ಫೆಸಿಫಿಕ್ ಮಹಾಸಾಗರದ ನಡುವೆ ಹಾದುಹೋಗಿರುವ ಈ ಕಾಲ್ಪನಿಕ ರೇಖೆ ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೂ ಹಬ್ಬಿದೆ ಹಾಗೂ ಇದರ ಪೂರ್ವಪಶ್ಚಿಮಕ್ಕಿರುವ ದೇಶಗಳ ಕ್ಯಾಲೆಂಡರ್ ದಿನವನ್ನು ಪ್ರತ್ಯೇಕಿಸುತ್ತದೆ.




ಈ ದ್ವೀಪಗಳಿಗೆ ಸಂಬಂಧಿಸಿದ ಇನ್ನೊಂದು ವಿಸ್ಮಯ, ಚಳಿಗಾಲದಲ್ಲಿ ಸಾಗರದ ನೀರು ಹೆಪ್ಪುಗಟ್ಟಿ ಈ ದ್ವೀಪಗಳ ನಡುವೆ ನೈಸರ್ಗಿಕವಾಗಿ ನಿರ್ಮಾಣವಾಗುವ 'ಹಿಮದ ಸೇತುವೆ'. ಹೀಗಾಗಿ ತಾಂತ್ರಿಕವಾಗಿ ರಷ್ಯಾ ದೇಶದಿಂದ ಅಮೆರಿಕ ದೇಶಕ್ಕೆ ಕಾಲ್ನಡಿಗೆಯಲ್ಲೇ ಹೋಗಬಹುದು! ಆದರೆ ಅಂತರರಾಷ್ಟ್ರೀಯ ಗಡಿಯಾಗಿರುವ ಕಾರಣ ಅಂತಹ ಸಂಚಾರಕ್ಕೆ ಅವಕಾಶವಿಲ್ಲ.

ಡಯೋಮೀಡ್ ದ್ವೀಪದಲ್ಲಿನ ನಿವಾಸಿಗಳನ್ನು ರಷ್ಯಾ ಸ್ಥಳಾಂತರಿಸಿದೆ. ಅದೀಗ ರಷ್ಯಾದ ಸೈನಿಕ ನೆಲೆಯಾಗಿದೆ. ಅಲಾಸ್ಕದಿಂದ ಹದಿನಾರು ಮೈಲು ದೂರದಲ್ಲಿದ್ದು ಸುಮಾರು 2.80 ಚದರ ಮೈಲು ವಿಸ್ತೀರ್ಣ ಹೊಂದಿರುವ ಅಮೆರಿಕದ ಡಯೋಮೀಡ್ ದ್ವೀಪದಲ್ಲಿನ ಪಶ್ಚಿಮ ಭಾಗದಲ್ಲಿ 'ಇನುಪಿಯಾತ್ ಎಸ್ಕಿಮೊ' ಸಮುದಾಯದ ನೂರಕ್ಕಿಂತಲೂ ಕಡಿಮೆ ಜನ ವಾಸವಾಗಿದ್ದಾರೆ. ಅಲ್ಲೊಂದು ಶಾಲೆ, ಅಂಚೆ ಕಚೇರಿ ಹಾಗೂ ಆದಿವಾಸಿ ಅಂಗಡಿ ಇದ್ದು, ಕೆಲವೊಂದು ಆಹಾರ ಪದಾರ್ಥಗಳನ್ನು ಹೆಲಿಕಾಪ್ಟರ್ ಮೂಲಕ ಸರಬರಾಜು ಮಾಡಲಾಗುತ್ತದೆ. ಅಲ್ಲಿನ ಜನ ಸಾವಿರಾರು ವರ್ಷಗಳ ಪಾರಂಪರಿಕ ಜೀವನಶೈಲಿ ಅನುಸರಿಸುತ್ತ ಬಹುತೇಕ ಸ್ವಾವಲಂಬಿಗಳಾಗಿದ್ದಾರೆ.

ರಷ್ಯಾದ ಸೆಮಿಯೋನ್ ಡೆಜ್ನೆಹೇವ್ 1648ರಲ್ಲಿ ಈ ಭಾಗದ ಎರಡು ದ್ವೀಪವಾಸಿಗಳು ತುಟಿಯ ಆಭರಣ ಧರಿಸುತ್ತಾರೆಂದು ದಾಖಲಿಸಿದ್ದರೂ ಅವು ಡಯೋಮೀಡ್ ದ್ವೀಪಗಳ ಕುರಿತಾದ ಹೇಳಿಕೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಡೆನ್ಮಾರ್ಕ್‌ನ ನಾವಿಕ ವೈಟಸ್ ಬೆರಿಂಗ್ 1728ರ ಆಗಸ್ಟ್ 16ರಂದು ಈ ದ್ವೀಪಗಳನ್ನು ಮರಳಿ ಅನ್ವೇಷಿಸಿದ. ಆಗಸ್ಟ್ 16ರಂದು ರಷ್ಯಾದ ಸಾಂಪ್ರದಾಯಿಕ ಚರ್ಚ್‌ನಲ್ಲಿ ಸಂತ ಡಯೋಮೀಡನ ಆರಾಧನಾ ಮಹೋತ್ಸವ ಆಚರಿಸಲಾಗುತ್ತದೆ. ಆದ್ದರಿಂದ ಈ ದ್ವೀಪಗಳಿಗೆ 'ಡಯೋಮೀಡ್ ದ್ವೀಪ'ಗಳೆಂದು ಎಂದು ನಾಮಕರಣ ಮಾಡಲಾಯಿತು.

1867ರ ರಷ್ಯಾ, ಅಮೆರಿಕದ ನಡುವಿನ ಅಲಾಸ್ಕ ಖರೀದಿ ಒಪ್ಪಂದದ ಪ್ರಕಾರ ಈ ದ್ವೀಪಗಳನ್ನು ರಷ್ಯಾ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನದ ಅಂತರರಾಷ್ಟ್ರೀಯ ಗಡಿಗಳೆಂದು ಗುರುತಿಸಲಾಗಿದೆ. ■